ಹೆಡಿಗೆ ಜಾತ್ರೆ ಇಂದು

ಹುಕ್ಕೇರಿ : ತಾಲೂಕಿನ ಎಲಿಮುನ್ನೋಳಿ ಗ್ರಾಮದಲ್ಲಿ ಮಳೆಗಾಗಿ ಪ್ರಾರ್ಥಿಸುವ ಹೆಡಿಗೆ ಜಾತ್ರೆ ಆಗಸ್ಟ್ 7 ರಂದು ವಿಜೃಂಭಣೆಯಿಂದ ಜರುಗಲಿದೆ.

ಜಾತ್ರೆಯ ಅಂಗವಾಗಿ ಬೆಳಿಗ್ಗೆಯಿಂದಲೇ ಗ್ರಾಮದಲ್ಲಿ ಧಾರ್ಮಿಕ ಕಾರ್ಯಕ್ರಮ ಆರಂಭವಾಗಲಿವೆ. ಗ್ರಾಮದ ದೇವತೆ ಮಹಾಲಕ್ಷ್ಮೀ ದೇವಸ್ಥಾನ ಸೇರಿದಂತೆ ಗ್ರಾಮದ ಎಲ್ಲ ದೇವಾಲಯಗಳಿಗೆ ವಿಶೇಷ ಜಲಾಭಿಷೇಕ ಮತ್ತು ಪಂಚಾಮೃತ ಅಭಿಷೇಕ ನೆರವೇರಿಸಲಾಗುವುದು. ಪುರೋಹಿತರು ವೇದ ಮಂತ್ರಗಳೊಂದಿಗೆ ಪೂಜೆ ಸಲ್ಲಿಸಲಿದ್ದಾರೆ. ಅಭಿಷೇಕದ ನಂತರ ಸಕಲ ವಾದ್ಯ ಮೇಳದೊಂದಿಗೆ ಮೆರವಣಿಗೆ ನಡೆಯಲಿದೆ.

ಸುಮಂಗಲೆಯರಿಂದ ಪೂರ್ಣಕುಂಭ ಆರತಿ ಮತ್ತು ಮಡಿ ಉತ್ಸವ ನಡೆಯಲಿದೆ. ನಂತರ ಮಹಾಲಕ್ಷ್ಮಿ ಮತ್ತು ಶ್ರೀರಾಮಲಿಂಗೇಶ್ವರ ದೇವರ ಪಲ್ಲಕ್ಕಿ ಉತ್ಸವ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಲಿದೆ. ಭಕ್ತರು ಭಜನೆ, ಜಾಗಟೆ, ಡೊಳ್ಳು ವಾದ್ಯಗಳೊಂದಿಗೆ ದೇವರನ್ನು ಭಕ್ತಿಯಿಂದ ಬೀಳ್ಕೊಡಲಿದ್ದಾರೆ.

ಉತ್ಸವದ ಕೊನೆಯಲ್ಲಿ ಸರ್ವರಿಗೂ ಮಹಾಪ್ರಸಾದ ವಿತರಣೆ ಮಾಡಲಾಗುವುದು. ಗ್ರಾಮದ ಸುತ್ತ-ಮುತ್ತಲಿನ ಹಳ್ಳಿಗಳಿಂದಲೂ ಸಾವಿರಾರು ಭಕ್ತರು ಈ ಜಾತ್ರೆಗೆ ಆಗಮಿಸುವ ನಿರೀಕ್ಷೆ ಇದೆ. ಕಳೆದ ವರ್ಷ ಮಳೆ ಕಡಿಮೆಯಾಗಿದ್ದರಿಂದ ಈ ಬಾರಿ ಉತ್ತಮ ಮಳೆಗಾಗಿ ಮತ್ತು ಗ್ರಾಮದ ಸುಭಿಕ್ಷತೆಗಾಗಿ ಈ ಜಾತ್ರೆ ಆಚರಿಸಲಾಗುತ್ತಿದೆ. ಭಕ್ತರು ಶಿಸ್ತಿನಿಂದ ಪಾಲ್ಗೊಳ್ಳುವಂತೆ ಜಾತ್ರಾ ಕಮಿಟಿಯವರು ತಿಳಿಸಿದ್ದಾರೆ.

'ನನ್ನ ರೇಷ್ಮೆ ನನ್ನ ಹೆಮ್ಮೆ' ಕಾರ್ಯಕ್ರಮ । ಆಧುನಿಕ ಕೃಷಿ ಭರಾಟೆಯಲ್ಲಿ ಭೂಮಿಯ ಫಲವತ್ತತೆ ಹಾಳು

ಗುಣಮಟ್ಟದ ನಿರ್ವಹಣೆಯಿಂದ ಉತ್ತಮ ಬೆಳೆ

ಚಿಕ್ಕೋಡಿ ತಾಲೂಕಿನ ಉಮರಾಣಿ ಗ್ರಾಮದ ಪ್ರಗತಿಪರ ರೈತ ಮಹಾಂತೇಶ ದೊಡ್ಡಮನಿಯವರ 'ನನ್ನ ರೇಷ್ಮೆ ನನ್ನ ಹೆಮ್ಮೆ' ಕಾರ್ಯಕ್ರಮಕ್ಕೆ ಜಂಟಿ ನಿರ್ದೇಶಕ ಪಿ.ಎಲ್. ಚಂದ್ರಪ್ಪಾ ಚಾಲನೆ ನೀಡಿ ಮಾತನಾಡಿದರು.

> ಕೃಷಿಯಲ್ಲಿ ನಾವು ಪ್ರಗತಿ ಸಾಧಿಸಬೇಕಾದರೆ ರೈತರು ರೇಷ್ಮೆ ಇಲಾಖೆಯ ಮಾರ್ಗದರ್ಶನದಲ್ಲಿ ತೋಟ ನಿರ್ವಹಣೆ ಮಾಡಬೇಕು. ಅತಿಯಾಗಿ ರಸಗೊಬ್ಬರ ಮತ್ತು ಕೀಟ ನಾಶಕ ಬಳಕೆ ಮಾಡದೆ, ಕೊಟ್ಟಿಗೆ ಗೊಬ್ಬರ ನೀಡಿ ಸಾವಯವ ಕೃಷಿ ಮಾಡಬೇಕು.
>
> ■ ಮಹೇಶಕುಮಾರ ವಾಗೆ
> । ರೇಷ್ಮೆ ಉಪನಿರ್ದೇಶಕ

ಸಂ.ಕ ಸಮಾಚಾರ, ಚಿಕ್ಕೋಡಿ

ರೇಷ್ಮೆ ಗೂಡು ಉತ್ಪಾದನೆಯಲ್ಲಿ ಗ್ರಾಮೀಣ ಜನರು ಹೆಚ್ಚು ಮಾಡಿಕೊಳ್ಳಬೇಕು. ಇದರಿಂದ ರೈತರು ಆರ್ಥಿಕವಾಗಿ ಸದೃಢವಾಗುತ್ತಾರೆ ಎಂದು ಬೆಳಗಾವಿ ರೇಷ್ಮೆ ಜಂಟಿ ನಿರ್ದೇಶಕ ಚಂದ್ರಪ್ಪಾ ಪಿ.ಎಲ್ ಹೇಳಿದರು.

ತಾಲೂಕಿನ ಉಮರಾಣಿ ಗ್ರಾಮದಲ್ಲಿ 'ನನ್ನ ರೇಷ್ಮೆ ನನ್ನ ಹೆಮ್ಮೆ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರೇಷ್ಮೆ ಹುಳುಗಳಿಗೆ ಗುಣಮಟ್ಟದ ಸೊಪ್ಪು, ಉತ್ತಮ ವಾತಾವರಣವಿದ್ದರೆ ಗುಣಮಟ್ಟವಾಗಿ ಬೆಳೆ ಬರುತ್ತದೆ. ರೇಷ್ಮೆ ಕೃಷಿಯಲ್ಲಿ ಇನ್ನಷ್ಟು ಪ್ರಗತಿ ಸಾಧಿಸಲು ಇಲಾಖೆಯಿಂದ ರೈತರ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದರು.

ರೇಷ್ಮೆ ಬೆಳೆಗಾರರು ರೇಷ್ಮೆ ಹುಳುಗಳಿಗೆ ಗುಣಮಟ್ಟದ ಸೊಪ್ಪು, ಉತ್ತಮ ವಾತಾವರಣ ಬೇಕಾಗುತ್ತದೆ. ರೇಷ್ಮೆ ತೋಟವನ್ನು ಗುಣಮಟ್ಟದ ನಿರ್ವಹಣೆ ಮಾಡಿದರೆ ಗುಣಮಟ್ಟದ ಬೆಳೆ ಬರುತ್ತದೆ. ತೋಟ ನಿರ್ವಹಣೆಯಲ್ಲಿ ನಮ್ಮ ರೈತರು ಎಡವುತ್ತಿದ್ದಾರೆ. ಆಧುನಿಕ ರೇಷ್ಮೆ ಕೃಷಿ ವಿಧಾನದಲ್ಲಿ ರೈತರು ಅತಿಯಾಗಿ, ಯೂರಿಯಾ, ರಸಗೊಬ್ಬರ,ಕೀಟನಾಶಕ,ಕಳೆನಾಶಕಬಳಸುತ್ತಿರುವುದರಿಂದ ಭೂಮಿ ಫಲವತ್ತತೆ ಕಳೆದುಕೊಂಡು ಬರಡಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಕೇಂದ್ರೀಯ ರೇಷ್ಮೆ ಮಂಡಳಿ ವಿಜ್ಞಾನಿ ಯಲ್ಲಪ್ಪ ಹರಿಜನ ಮಾತನಾಡಿ, ರೇಷ್ಮೆ ಕೃಷಿಯಲ್ಲಿ ಹೆಚ್ಚಿನ ಇಳುವರಿ ಪಡೆಯಲು ನೂತನ ತಂತ್ರಜ್ಞಾನ ಹಾಗೂ ರೇಷ್ಮೆ ತಳಿಗಳನ್ನು ಅವಿಷ್ಕಾರ ಮಾಡಲಾಗಿದೆ. ಹಿಪ್ಪು ನೇರಳಿ ತೋಟದಲ್ಲಿ ಎಲೆಗೆ ಬರುವ ತೀಪ್ಪ ಆಂಡ ಮೈಟ್ಸ ಎಂಬ ರೋಗ ಬರದಂತೆ ತಡೆಗಟ್ಟುವ ವಿಧಾನದ ಬಗ್ಗೆ ತಿಳಿಸಿದರು.

ವಿಜಿ ರಾಮಜಿ ಸಂಯೋಜಕ ರಂಜೀತ ಕಾರ್ಣಿಕ ಮಾತನಾಡಿ, ಕೇಂದ್ರ ಸರಕಾರ ಈ ಯೋಜನೆಯಲ್ಲಿ ವೈಯಕ್ತಿಕ ಕಾಮಗಾರಿಗೆ ಅವಕಾಶ ನೀಡಲಾಗಿದೆ. ರೈತರು ಇದರ ಸದುಪಯೋಗಪಡಿಸಿಕೊಳ್ಳುವಂತೆ ಕರೆ ನೀಡಿದರು.

ರೇಷ್ಮೆ ಉಪನಿರ್ದೇಶಕ ಮಹೇಶಕುಮಾರ ವಾಗೆ ಮಾತನಾಡಿದರು. ರೇಷ್ಮೆ ಸಹಾಯಕ ನಿರ್ದೇಶಕ ಪಿ.ಎಂ. ವಿಮನಗೌಡರ,ಚಿಕ್ಕೋಡಿ-ನಿಪ್ಪಾಣಿರೇಷ್ಮೆವಿಸ್ತರಣಾಧಿಕಾರಿ ಆಕಾಶರಾಜ ನಡುವಿನಮನಿ, ಸಂತೋಷ ಗೋಣೆ, ನಿಲೇಶ ನಾಯಿಕ, ಪ್ರಗತಿಪರ ರೇಷ್ಮೆ ಬೆಳೆಗಾರ ಮಹಾಂತೇಶ ದೊಡ್ಡಮನಿ ಹಾಗೂ ರೈತರು ಉಪಸ್ಥಿರಿದ್ದರು.

ಚಿಕ್ಕೋಡಿ ತಾಲೂಕಿನ ನಾಗರಮುನ್ನೋಳ್ಳಿ ಗ್ರಾಮದಲ್ಲಿ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಕ್ಕೆ ಶಾಸಕ ದುರ್ಯೋದನ ಐಹೊಳೆ ಚಾಲನೆ ನೀಡಿದರು.

ತಿಂಗಳಲ್ಲಿ ಎಲ್ಲಾ ಕೆರೆ ಭರ್ತಿ

ಚಿಕ್ಕೋಡಿ: ಕರಗಾಂವ ಹಾಗೂ ಹನುಮಾನ ಏತ ನೀರಾವರಿ ಯೋಜನೆಗಳ ಮಂಜೂರಾತಿ ಯಾರು ಮಾಡಿಸಿದ್ದಾರೆ ಎಂಬದು ಮತದಾರರಿಗೆ ಗೊತ್ತಿದೆ. ಅವರ ಆರ್ಶಿವಾದ ಸದಾ ನನ್ನ ಮೇಲೆ ಇದೆ ಎಂದು ಶಾಸಕ ದುರ್ಯೋದನ ಐಹೊಳೆ ಹೇಳಿದರು.

ತಾಲೂಕಿನ ನಾಗರಮುನ್ನೋಳ್ಳಿ ಗ್ರಾಮದಲ್ಲಿ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಕ್ಕೆ ಚಾಲನೆ ನೀಡಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾಜದ ಕಟ್ಟ ಕಡೆಯ ಜನರಿಗೆ ಆರೋಗ್ಯ ಸೇವೆ ನೀಡಲು ಆರೋಗ್ಯ ಕೇಂದ್ರ ಪ್ರಾರಂಭಿಸಲಾಗುತ್ತದೆ ಎಂದರು.

ಕ್ಷೇತ್ರದಲ್ಲಿ ಮೂಲ ಸೌಕರ್ಯ, ಆರೋಗ್ಯ ಹಾಗೂ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಇನ್ನು ಒಂದು ತಿಂಗಳಲ್ಲಿ ರಾಯಬಾಗ ವಿಧಾನಸಭಾ ಕ್ಷೇತ್ರದಲ್ಲಿನ ಎಲ್ಲಾ ಕೆರೆ ತುಂಬಿಸಲಾಗುವುದು. ಕೆರೆ ತುಂಬಿಸುವ ಪೈಪಲೈನ್ ಲಿಕೇಜ್ ಇರುವ ಕಡೆಯಲ್ಲಿ ತಾವೆ ಖುದ್ದಾಗಿ ಭೆಟ್ಟಿ ನೀಡಿ ದುರಸ್ತಿ ಮಾಡಿ ಕೆರೆಗೆ ನೀರು ತುಂಬಿಸಲಾಗುವುದು ಎಂದು ಭರವಸೆ ನೀಡಿದರು. ಸುರೇಶ ಬೆಲ್ಲದ, ವಿರುಪಾಕ್ಷ ಈಟಿ, ರಮೇಶ ಕಾಳನ್ನವರ, ಅರುಣ ಮರ್ಯಾಯಿ, ರಾಜು ಕುಂಬಾರ, ಎಂ.ಬಿ. ಆಲೂರೆ, ನಿಜಾಮ ಪೆಂಡಾರೆ, ರಾಮಗೌಡ ಪಾಟೀಲ, ಎಂ.ಎಸ್. ಚೌಗಲಾ, ಬಾಬು ಕಾಳನ್ನವರ, ಕಲ್ಲಪ್ಪಾ ಪಾಶ್ಚಾಪುರೆ, ರಾಮಣ್ಣಾ ಹಾಲಟ್ಟಿ, ಶಂಕರ ಬಸಗೌಡನ್ನವರ, ಶಿವಗೌಡ ಕೋಟಾಪ್ಪಗೋಳ, ಆರೋಗ್ಯ ಇಲಾಖೆ ಎಇಇ ಯಾದಗೂಡೆ ಇತರರು ಇದ್ದರು.

ಆರ್‌ಡಿಎಸ್ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಿದ್ದ ಪತ್ರಿಕಾ ದಿನಾಚರಣೆಯಲ್ಲಿ ಮುರಗೇಶ ಶಿವಪೂಜಿ ಮಾತನಾಡಿದರು.

ಪತ್ರಿಕಾರಂಗದಿಂದ ಪ್ರಜಾಪ್ರಭುತ್ವ ಬಲಿಷ್ಠ

ಮೂಡಲಗಿ : ಭಾರತದ ಪ್ರಜಾಪ್ರಭುತ್ವ ಇಷ್ಟು ಬಲಿಷ್ಠವಾಗಿರಲು ಪತ್ರಿಕಾರಂಗ ಕಾರಣ, ಕಾರ್ಯಾಂಗ ಶಾಸಕಾಂಗ ನ್ಯಾಯಾಂಗಗಳು ಚೌಕಟ್ಟು ದಾಟದಂತೆ ಪ್ರತಿಕಾರಂಗವೂ ಕಾವಲು ಕಾಯುತ್ತದೆ ಎಂದು ಕರ್ನಾಟಕ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಮುರಗೇಶ ಶಿವಪೂಜಿ ಹೇಳಿದರು

ಪಟ್ಟಣದ ಆರ್‌ಡಿಎಸ್ ಕಾಲೇಜಿನ ಸಭಾಂಗಣದಲ್ಲಿ ಕರ್ನಾಟಕ ಪತ್ರಕರ್ತರ ಸಂಘದ ಮೂಡಲಗಿ ತಾಲೂಕಾ ಘಟಕ ಹಾಗೂ ಆರ್‌ಡಿಎಸ್ ಪದವಿಪೂರ್ವ ಮಹಾವಿದ್ಯಾಲಯದ ಆಶ್ರಯದಲ್ಲಿ 2026ರ ಪತ್ರಿಕಾ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ 'ಸಾಮಾಜಿಕ ಅರಿವು' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಿಪಿಐ ಶ್ರೀಶೈಲ ಬ್ಯಾಕೂಡ ಮಾತನಾಡಿ, ಪತ್ರಕರ್ತರು, ಪೋಲಿಸರು ಸಹೋದರರಂತೆ ಕಾರ್ಯ ಮಾಡುತ್ತಾರೆ. ಇಬ್ಬರು 24ಥ7 ಕಾರ್ಯ ಮಾಡುವವರೆ. ಇಲಾಖೆಯ ಮಾಹಿತಿಯನ್ನು ನಾವು ಪತ್ರಕರ್ತರ ಮೂಲಕ ಸಮಾಜಕ್ಕೆ ತಿಳಿಸುತ್ತೇವೆ. ಪೊಲೀಸ್ ಇಲಾಖೆಗಿಂತ ಮೊದಲು ಪತ್ರಕರ್ತರಿಗೆ ಮಾಹಿತಿ ಇರುತ್ತದೆ. ಪತ್ರಕರ್ತರಿಂದ ಹಲವು ಮಾಹಿತಿ ಇಲಾಖೆಗೆ ಲಭ್ಯವಾಗಿವೆ ಎಂದರು.

ನಿವೃತ್ತ ಉಪನ್ಯಾಸಕ ಎಸ್.ಎಂ. ಕಮದಾಳ ಮಾತನಾಡಿದರು. ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಸಂಪತಕುಮಾರ ಮುಚಳಂಬಿ, ಸಿಪಿಐ ಶ್ರೀಶೈಲ ಬ್ಯಾಕೂಡ, ಪಶು ಪಾಲನಾ ಇಲಾಖೆಯ ಪ್ರಶಾಂತ ಕುರಬೇಟ, ಮೂಡಲಗಿ ಘಟಕದ ಅಧ್ಯಕ್ಷ ಉಮೇಶ ಬೆಳಕೂಡ ಮಾತನಾಡಿದರು.

ಸಂಸ್ಥೆಯ ಅಧ್ಯಕ್ಷ ಸಂತೋಷ ಪಾರ್ಶಿ, ಕರ್ನಾಟಕ ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯ ಶಿವಾನಂದ ಮುಧೋಳ, ತಹಶೀಲ್ದಾರ್ ಕಚೇರಿಯ ಶಿರಸ್ತೆದಾರ ಪರಶುರಾಮ ನಾಯ್ಕ, ನೋಂದಣಾಧಿಕಾರಿ ಡಿ.ಕೆ. ಕುಳ್ಳೂರ, ಡಾ.ಭಾರತಿ ಕೋಣಿ, ಇಂದಿರಾ ಭೋವಿ, ಪ್ರಭಾರಿ ಪಿಎಸ್‌ಐ ರಾಜು ಪೂಜೇರಿ, ಮಹಾಂತೇಶ ಯರಗಟ್ಟಿ, ಪಿ.ವಿ. ಚವ್ಹಾಣ, ವೀರಭದ್ರ ಕೋರೆ, ದಾನಪ್ಪ ಗುದಪ್ಪನ್ನವರ, ಅರುಣ ಬಣಗಾರ, ಶಿವಭೋದ ಗುಣಕಿ, ಲಕ್ಷ್ಮಣ ಬೂದಿಹಾಳ, ಸಚಿನ ಪತ್ತಾರ, ರಮೇಶ ಮಾಳಿ, ಶಿವಬಸು ಕುಲಗೋಡ ಇದ್ದರು. ಚಂದ್ರಶೇಖರ ಪತ್ತಾರ ನಿರೂಪಿಸಿದರು. ಸುಭಾಸ ಕಡಾಡಿ ಸ್ವಾಗತಿಸಿದರು. ಮಲ್ಲಪ್ಪ ಹೆಬ್ಬಳಿ ವಂದಿಸಿದರು.

ಹಾಸ್ಯ ಭಾಷಣ ಸ್ಪರ್ಧೆ

ಬೆಳಗಾವಿ: ನಗರದ ಹಾಸ್ಯಕೂಟ ಮತ್ತು ಸಾಹಿತ್ಯ ಭವನ ವಿಶ್ವಸ್ತ ಮಂಡಳಿಯವರು ಚೆನ್ನಮ್ಮ ವೃತ್ತದ ಬಳಿಯಿರುವ ಕನ್ನಡ ಸಾಹಿತ್ಯ ಭವನದಲ್ಲಿ ಆ.8ರಂದು ಸಂಜೆ 4.30ಕ್ಕೆ ಪ್ರೌಢಶಾಲಾ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗಾಗಿ ಹಾಸ್ಯ ಭಾಷಣ(ಸ್ಟಾಂಡ್ ಅಪ್ ಕಾಮಿಡಿ) ಸ್ಪರ್ಧೆ ಹಮ್ಮಿಕೊಂಡಿದ್ದಾರೆ.

ಅಧ್ಯಕ್ಷತೆಯನ್ನು ಲೇಖಕ ಪಿ.ಬಿ. ಸ್ವಾಮಿ ವಹಿಸಲಿದ್ದಾರೆ. ರಂಗಸಂಪದದ ಅಧ್ಯಕ್ಷ ಡಾ.ಅರವಿಂದ ಕುಲಕರ್ಣಿ ಹಾಗೂ ಕಾವ್ಯಾ ವಾದಿರಾಜ ರಾಯರ ಅವರು ಪ್ರಾಯೋಜಕತ್ವ ವಹಿಸಿಕೊಂಡಿದ್ದಾರೆ.

ಕನ್ನಡ ಸಾಹಿತ್ಯ ಭವನ ವಿಶ್ವಸ್ತ ಮಂಡಳಿಯ ಗೌರವ ಕಾರ್ಯದರ್ಶಿ ರಾಮಚಂದ್ರ ಕಟ್ಟಿ ಉಪಸ್ಥಿತರಿರುತ್ತಾರೆ.

ಮಾವಿನಕಟ್ಟೆ ಸರಕಾರಿ ಪ್ರೌಢಶಾಲೆಯ ಸಂಜೀವಿನಿ ಕೋಲಕಾರ, ಕೆ.ಎಲ್.ಇ. ಪ್ರೌಢಶಾಲೆಯ ನಿಖಿಲ ಮಾಶೆಟ್ಟಿ, ಬಿ.ಕೆ. ಮಾಡೆಲ್ ಪ್ರೌಢಶಾಲೆಯ ಕಾವ್ಯಶ್ರೀ ಸವದತ್ತಿ, ಕೆ.ಜಿ.ಎಸ್. ನಂ. 5 ಪ್ರೌಢಶಾಲೆಯ ಶ್ರೇಯಾ ಬೇವಿನಗಿಡದ ಮತ್ತು ಸ್ಫೂರ್ತಿ ಕಾಮಕರ, ಬೆಳಗಾವಿ ಸರಕಾರಿ ಸರಸ್ವತಿ ಬಾಲಕಿಯರ ಪ್ರೌಢಶಾಲೆಯ ವೈಷ್ಣವಿ ಭಸ್ಮೆ ಮತ್ತು ರಾಜೇಶ್ವರಿ ಮತ್ತಿಕೊಪ್ಪ ಅಲ್ಲದೇ ಹಡಗಿನಹಾಳದ ಸರಕಾರಿ ಪ್ರೌಢಶಾಲೆ ಪ್ರಜ್ವಲ ಜಕಬಾಳ ಹಾಸ್ಯ ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ.

ಪ್ರಥಮ ರೂ. 1000, ದ್ವಿತೀಯ ರೂ. 700 ಮತ್ತು ತೃತೀಯ ರೂ. 300 ಮೂರು ನಗದು ಬಹುಮಾನಗಳಿವೆ. ಅಲ್ಲದೇ ಭಾಗವಹಿಸಿದ್ದಾಗಿ ಎಲ್ಲರಿಗೂ ಪ್ರಮಾಣಪತ್ರ ನೀಡಲಾಗುವುದು. ಹೆಚ್ಚಿನ ವಿವರಗಳಿಗಾಗಿ ಮೊ. ಸಂಖ್ಯೆ 9448093589 ಗೆ ಸಂಪರ್ಕಿಸಬಹುದಾಗಿದೆ.

ಸಾರಿಗೆ ಅದಾಲತ್

ಬೆಳಗಾವಿ: ಸಾರ್ವಜನಿಕರು, ವಾಹನ ಮಾಲಿಕರು, ವಾಹನ ವಿತರಕರು ಹಾಗೂ ಚಾಲನಾ ಅನುಜ್ಞಾಪತ್ರ ಹೊಂದಿದ-ಹೊಂದುವ ಸಾರ್ವಜನಿಕರಿಗೆ ನಗರದ ಪ್ರಾದೇಶಿಕ ಸಾರಿಗೆ ಕಚೇರಿಯ ಆವರಣದಲ್ಲಿ ಆ.11ರಂದು ಬೆಳಿಗ್ಗೆ 11:30ಕ್ಕೆ ಸಾರಿಗೆ ಅದಾಲತ್ ಹಮ್ಮಿಕೊಳ್ಳಲಾಗಿದೆ.

ಆದ್ದರಿಂದ ಸಾರ್ವಜನಿಕರು ಈ ಸಾರಿಗೆ ಅದಾಲತ್ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಕುಂದು-ಕೊರತೆ ಪರಿಹರಿಸಿಕೊಳ್ಳಲು ಹಾಗೂ ಈ ಕಚೇರಿಯಲ್ಲಿ ತಮ್ಮ ಅರ್ಜಿಗಳು ಬಾಕಿ ಇದ್ದಲ್ಲಿ ಸೂಕ್ತ ದಾಖಲೆಗಳೊಂದಿಗೆ ಹಾಜರಾಗಿ ಅರ್ಜಿ ವಿಲೇವಾರಿಗೊಳಿಸಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ನಿಧನ ವಾರ್ತೆ

ಮಲ್ಲವ್ವ ಮಡಿವಾಳರ

ಸವದತ್ತಿ : ಪಟ್ಟಣದ ನಿವಾಸಿ ಮಲ್ಲವ್ವ ಮಡಿವಾಳರ ನಿಧನರಾದರು. ಮೃತರಿಗೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗ ಇದ್ದಾರೆ.

ಟೈಗರ್

9ರಂದು ವಿದ್ಯುತ್ ವ್ಯತ್ಯಯ

ಹುಕ್ಕೇರಿ : ತಾಲೂಕಿನ ದಡ್ಡಿ 110/11 ಕೆವ್ಹಿ ವಿದ್ಯುತ್ ಉಪಕೇಂದ್ರದ ತ್ರೈಮಾಸಿಕ ನಿರ್ವಹಣಾ ಕಾರ್ಯದ ನಿಮಿತ್ತ ಆ.9 ರಂದು ಬೆಳಿಗ್ಗೆ 8ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಈ ವಿದ್ಯುತ್ ಕೇಂದ್ರದ ವ್ಯಾಪ್ತಿಯ ಗ್ರಾಮಗಳಾದ ಮಣಗುತ್ತಿ, ಮಾಸ್ತಿಹೊಳಿ, ನರಸಿಂಗಪೂರ, ಮೋದಗಾ, ದಡ್ಡಿ, ಶೆಟ್ಟಿಹಳ್ಳಿ, ಸಲಾಮವಾಡಿ, ನಾಗನೂರ ಕೆ.ಎಂ, ಮಸ್ತಿ, ಕೋಟ, ಬಿದ್ರೆವಾಡಿ, ಅತ್ತಿಹಾಳ, ಅಲದಾಳ, ಮಾನಗಾಂವ, ಬೋಳಶ್ಯಾನಟ್ಟಿ, ದೊಂಡಗಟ್ಟಿ, ಬೆನಕನಹೊಳಿ, ಖವನೇವಾಡಿ, ಬೆಳ್ಳಂಕಿ, ಮಾರನಹೊಳಿ, ನಾಗನೂರ ಕೆ.ಡಿ ಸುತ್ತಮುತ್ತಲಿನ ಗ್ರಾಮಗಳಿಗೆ ವಿದ್ಯುತ್ ವ್ಯತ್ಯಯವಾಗಲಿದ್ದು ಸಾರ್ವಜನಿಕರು ಸಹಕರಿಸಬೇಕೆಂದು ಹುಕ್ಕೇರಿಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

BEFORE THE JOINT CHARITY COMMISSIONER, VADODARA REGION, VADODARA

Charity Bhavan, Opposite Polo Ground, Beside Lad Bhavan, Kirti Stambh, Vadodara.

PUBLIC NOTICE REGARDING SALE OF IMMOVABLE PROPERTY

Application No.: 36/33/2025

Before the Joint Charity Commissioner, Vadodara Region, Vadodara, the Trustees of **Jesus and Mary Gujarat Society, Anklav**, having Trust Registration No. **F/665/Anand**, have submitted an application under **Section 36 of the Gujarat Public Trusts Act, 1950**, seeking prior permission to sell the immovable property recorded in the P.T.R. of the Trust. The application has been registered as **Application No. 36/33/2025**. The description of the property covered under the application is as follows:

Sr. No.	Location and Address of the Property	Type and Description of the Property	Survey No./Re-survey No., etc.	Area of the Property (in Square Metres)	Upset Price of the Property (Rs.)
1	2	3	4	5	6
1	owned property situated at **Pandeshwara, Taluka Udupi, District Udupi, Sub-District Kota Hobli**	All Survey Numbers-Dry (Non-Converted) **Khata No. 1067**	(1) Survey No. **37**, S.D. No. **5-A2** (2) Survey No. **38**, S.D. No. **3A2D3** (3) Survey No. **38**, S.D. No. **3A2D2**	Area: **14 cents = 566.58 sq.m.** Area: **65.50 cents = 2,630.55 sq.m.** Area: **40 cents = 1,618.80 sq.m.** **Total Area: 119.50 cents = 4,815.13 sq.m.**	**Rs. 1,11,00,000/- (Rupees One Crore Eleven Lakhs Only) or above**

The Trust has applied for prior permission to sell the above-described property at the upset price of **Rs. 1,11,00,000/- (Rupees One Crore Eleven Lakhs Only) or above**. Therefore, the general public is hereby informed that any person interested in purchasing the above-mentioned property in its existing condition shall submit his/her offer (bid). Such offer shall be accompanied by a **Demand Draft in the name of the Trust for 50% (Fifty Percent) of the offered amount**, enclosed in a duly sealed cover and sent by **Registered Post A.D.** to the address of the Trust. A photocopy of the offer along with the Demand Draft shall also be sent by **Registered Post A.D.** to the **Joint Charity Commissioner, Office of the Joint Charity Commissioner, Charity Bhavan, Opposite Polo Ground, Beside Lad Bhavan, Kirti Stambh, Vadodara**. Both sealed covers shall clearly bear the endorsement **"Offer for Purchase of Property"** with reference to **Application No. 36/33/2025**.

Further, if any beneficiary or person interested in the Trust has any objection or dispute regarding the proposed transaction of the above-mentioned property, such person shall submit his/her written objections, together with the necessary supporting documents and evidence, along with his/her name, address, and affidavit, by **Registered Post A.D.**. The envelope shall be superscribed **"Objection Application Regarding Property"** with reference to **Application No. 36/33/2025**, and shall be addressed to the Trust, with a copy thereof forwarded to this office.

The offers and objections must reach the addresses mentioned below on or before **21/08/2026** by **Registered Post A.D.** The hearing of the objections shall be held on **25/08/2026 at 3:00 p.m.**, and the offers received by the Trust shall be opened before the **Joint Charity Commissioner, Vadodara**, in this office. Therefore, all persons submitting offers and/or objections shall remain present before this office on the aforesaid date and time, along with the relevant supporting particulars and documents, for the purpose of making their submissions.

-: Conditions for Submission of Offer (Bid) :-

(1) Any offer (bid) submitted without a Demand Draft, as well as any offer or objection received after the prescribed deadline, shall not be accepted or considered valid.

(2)